ನಿಮ್ಮ ವಸ್ತ್ರಗಳಲ್ಲಿ ಬಿಳಿ ಬಣ್ಣವಿರುವವುಗಳನ್ನು ಧರಿಸಿರಿ. ಖಂಡಿತವಾಗಿಯೂ ಅವು ನಿಮ್ಮ ವಸ್ತ್ರಗಳಲ್ಲಿ ಅತ್ಯುತ್ತಮವಾದವುಗಳು. ನಿಮ್ಮ ಮೃತರನ್ನು ಅವುಗಳಲ್ಲಿ (ಬಿಳಿ ವಸ್ತ್ರಗಳಲ್ಲಿ) ಕಫನ್ ಮಾಡಿರಿ

ಇಬ್ನ್ ಅಬ್ಬಾಸ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮ್ಮ ವಸ್ತ್ರಗಳಲ್ಲಿ ಬಿಳಿ ಬಣ್ಣವಿರುವವುಗಳನ್ನು ಧರಿಸಿರಿ. ಖಂಡಿತವಾಗಿಯೂ ಅವು ನಿಮ್ಮ ವಸ್ತ್ರಗಳಲ್ಲಿ ಅತ್ಯುತ್ತಮವಾದವುಗಳು. ನಿಮ್ಮ ಮೃತರನ್ನು ಅವುಗಳಲ್ಲಿ (ಬಿಳಿ ವಸ್ತ್ರಗಳಲ್ಲಿ)
ಕಫನ್ ಮಾಡಿರಿ".
[صحيح] [رواه أبو داود والترمذي وابن ماجه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪುರುಷರಿಗೆ ಬಿಳಿ ಬಣ್ಣದ ವಸ್ತ್ರಗಳನ್ನು ಧರಿಸಲು ಹಾಗೂ ಮೃತರನ್ನು ಅವುಗಳಲ್ಲಿ ಕಫನ್ (ಹೊದಿಯಲು) ಮಾಡಲು ನಿರ್ದೇಶಿಸುತ್ತಿದ್ದಾರೆ, ಏಕೆಂದರೆ ಅವು ಅತ್ಯುತ್ತಮ ವಸ್ತ್ರಗಳಾಗಿವೆ.

http://www.sunnah.global/hadeeth/kn/show/65553